## ಕಾಮಿಡಿ ಕನ್ನಡಿ

ಹೊಸ ಪ್ರಯೋಗಗಳಿಂದ ಗಮನ ಸೆಳೆಯುತ್ತಿರುವ ಕಾಮಿಡಿ ಕಿಲಾಡಿಗಳು ಈ ಬಾರಿ ಕನ್ನಡಿ ಕಸರತ್ತಿನ ಮೂಲಕ ಒಂದು ಹೆಜ್ಜೆ ಮುಂದೆ ಸಾಗಿತು. 'ಭೈರವ' ಚಲನಚಿತ್ರದಲ್ಲಿ ಜಗ್ಗೇಶ್ ಹಾಗೂ ವಜ್ರಮುನಿ ನಟಿಸಿದ ದೃಶ್ಯವೊಂದನ್ನು ಆಧರಿಸಿ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವೇ ಪರಿಶುದ್ಧವಾಗಿರಬೇಕೆಂದು ಉತ್ತಮ ಸಂದೇಶ ನೀಡಿದ್ದು ಮೆಚ್ಚುವಂತಿತ್ತು. ಅತಿಥಿಯಾಗಿದ್ದ ವಿನಯಾ ಪ್ರಸಾದ್ ಅದಕ್ಕೆ ಪೂರಕವಾಗಿ ಚಾರ್ಲಿ ಚಾಪ್ಲಿನ್ ಚಿತ್ರದ ಉದಾಹರಣೆ ಕೊಟ್ಟಿದ್ದೂ ಸಮಯೋಚಿತವಾಗಿತ್ತು. ಕನ್ನಡಿ ಇರುವಂತೆ ಭ್ರಮಿಸಿ ಪರಸ್ಪರ ವಿರುದ್ಧ ನೆರಳಿನಂತೆ ಅಭಿನಯಿಸಿದ ಕಲಾವಿದರ ಪ್ರತಿಭೆ ಮತ್ತೊಮ್ಮೆ ಸಾಬೀತಾಯಿತು.

–ವಾ. ಮುರಳೀಧರ,ತೀರ್ಥಹಳ್ಳಿ

## ಸನ್ನಿಧಿ ಮಹಾತ್ಮೆ?

ಅಂತೂ ಇಂತೂ 'ಅಗ್ನಿ ಸಾಕ್ಷಿ' ಮುಗಿಯಿತು. ಅದರಲ್ಲಿ ಅಗ್ನಿಯಾಗಲಿ ಸಾಕ್ಷಿಯಾಗಲಿ ಇರಲಿಲ್ಲ. ಕೇವಲ ದ್ವೇಷ–ರೋಷ ಇತ್ತು. ಸನ್ನಿಧಿ ಎಲ್ಲವನ್ನೂ ಮತ್ತು ಎಲ್ಲರನ್ನೂ ಸಂಭಾಳಿಸುವುದನ್ನು ಅಜೀರ್ಣ ಆಗುವಷ್ಟು ತೋರಿಸಲಾಗಿತ್ತು. ಇದರ ಹೆಸರನ್ನು 'ಸನ್ನಿಧಿ ಮಹಾತ್ಮೆ' ಅಥವಾ 'ದ್ವೇಷಾಗ್ನಿ' ಎಂದು ಇಟ್ಟಿದ್ದರೆ ಅರ್ಥಪೂರ್ಣವಾಗಿರುತಿತ್ತು.

–ರಮಾನಂದ ಶರ್ಮಾ, ನವದೆಹಲಿ

## ಮನ ಸೆಳೆಯುವ ಕಥೆ

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಜೊತೆ ಜೊತೆಯಲಿ' ಧಾರಾವಾಹಿ ವೀಕ್ಷಕರನ್ನು ಮನರಂಜಿಸುತ್ತಿದೆ. ವಿಭಿನ್ನ ರೀತಿಯ ಪ್ರೇಮಕಥೆ ಇದಾಗಿದ್ದು, ಮಧ್ಯಮ ವರ್ಗದವರ ಜೀವನಶೈಲಿಯ ಪ್ರತಿಬಿಂಬವಾಗಿದೆ. ಕಥೆ ವೇಗವಾಗಿ ಓಡುತ್ತಿದ್ದರೂ, ಮುಂದೇನಾಗಬಹುದು ಎಂಬ ಕುತೂಹಲವನ್ನು ಪ್ರತಿ ಸಂಚಿಕೆಯಲ್ಲೂ ಕಾಯ್ದುಕೊಳ್ಳುವಲ್ಲಿ ಸಫಲವಾಗಿದೆ.

ಕೋಟ್ಯಧಿಪತಿಯಾಗಿದ್ದರೂ ಸಹಿತ ಮೌಲ್ಯಗಳಲ್ಲಿ, ಸರಳತೆಯಲ್ಲಿ ನಮ್ಮ ಆರ್ಯವರ್ಧನ್ 'ಆದರ್ಶವರ್ಧನ್'ನಂತಿದ್ದಾರೆ. ಪಕ್ಕಾ ಲೋಕಲ್ ಮಾತನಾಡುವ 'ಪುಷ್ಪ–ಸುಬ್ಬು'ರ ಮಗಳು 'ಅನು' ಮುಗ್ಧತೆಯಿಂದ, ದಿಟ್ಟತನದಿಂದ ಮನಸೆಳೆಯುತ್ತಾಳೆ.

–ಚಂದ್ರಿಕಾ ಜೆ. ಬೆಂಗಳೂರು

ವಾರದ ಪತ್ರ

## ಈಸೋಪನ ಕಥೆಯೂ ಜಾನಕಿಯೂ

ಈಸೋಪನ ನೀತಿಕತೆಗಳಲ್ಲಿ ಕೊನೆಯದು ಎಂದೂ ಮುಗಿಯದ್ದು. ಒಂದು ರಾಶಿ ಧಾನ್ಯವಿದೆ. ಒಂದು ಹಕ್ಕಿ ಬಂತು, ಒಂದು ಕಾಳನ್ನು ಒಯ್ದಿತು, ಇನ್ನೊಂದು ಹಕ್ಕಿ ಬಂದಿತು ಇನ್ನೊಂದು ಕಾಳನ್ನು ಒಯ್ದಿತು.. ಮತ್ತೊಂದು... ಹೀಗೆ ಕತೆ ಮುಂದುವರೆಯುತ್ತದೆ. ಗಟ್ಟಿಕತೆ, ಉತ್ತಮ ಅಭಿನಯ, ಸಂಭಾಷಣೆ ಮನಸೆಳೆದಿದ್ದ ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯ ಈಚಿನ ಸಂಚಿಕೆಗಳನ್ನು ನೋಡಿದಾಗ ಈ ಕತೆಯ ನೆನಪಾಗುತ್ತದೆ.

ಒಂದು ಸಮಸ್ಯೆ ಸೃಷ್ಟಿಸಿ ಅದಕ್ಕೆ ಪರಿಹಾರ ಒದಗಿಸಿ ಬಳಿಕ ಮತ್ತೊಂದು ಸಮಸ್ಯೆ ಹುಟ್ಟುಹಾಕುವುದು ತಮ್ಮ ತಂತ್ರ ಎಂದು ನಿರ್ದೇಶಕರು ಈ ಹಿಂದೆ ಸಂವಾದದಲ್ಲಿ ಹೇಳಿಕೊಂಡಿದ್ದರು. ಆದರೆ ಶಾಂತರಾಜ, ದೇವಯಾನಿ, ವರುಣ್‌ವೈಭವ್, ಸಂಜನಾ, ಚಿರಂತನನ ಮೇಲಿನ ಕೊಲೆ ಯತ್ನದ ಪ್ರಕರಣ, ಧಾತ್ರಿ–ಮಧು ವಿವಾಹ ಈ ಎಲ್ಲ ಸಮಸ್ಯೆಗಳನ್ನೂ ಒಟ್ಟು ಹಾಕಿ, ಅವುಗಳನ್ನು ಪರಿಹರಿಸದೆ ಮಧುವನ್ನು ನ್ಯಾಯಾಂಗ ಸೇವೆಗೆ ಸೇರಿಸುವ ಹಂತಕ್ಕೆ ಬಂದಿದ್ದಾರೆ. ಆತ ಕೆಲಸ ಮಾಡುವ ಭೂಷಣ್ ಅಂಡ್ ಭೂಷಣ್ ಕಂಪನಿಗೆ 20 ಲಕ್ಷ ರೂಪಾಯಿ ಕಟ್ಟಬೇಕಾದ ಸನ್ನಿವೇಶ ಎದುರಾಗಿದೆ. ರಶ್ಮಿ ಆ ಹಣವನ್ನು ಕೊಡುತ್ತೇನೆ ಎಂದಿದ್ದಾರೆ. ಈಗ ಇದಕ್ಕಾಗಿ ಮತ್ತೇನು ಸಮಸ್ಯೆ ಎದುರಾಗುತ್ತದೆಯೋ? ಹಳೇ ಸಮಸ್ಯೆಗಳು ಇನ್ನೆಷ್ಟು ಕಾಲ ಮುಂದುವರಿಯುತ್ತವೋ ತಿಳಿಯದು.

–ಕೆ.ವಿ. ಮಂಜುನಾಥ್, ಸಾಗರ

## ಮರೀಚಿಕೆ

ಝೀ ವಾಹಿನಿಯ ಸೀಸನ್–3 'ಕಾಮಿಡಿ ಕಿಲಾಡಿಗಳು' ಕಾರ್ಯಕ್ರಮವು ತುಂಬಾ ಕಳಪೆ ಮಟ್ಟದ್ದಾಗಿದೆ. ಹೆಸರಿಗಷ್ಟೇ ಸೀಮಿತವಾಗಿರುವ ಈ ಶೋನಲ್ಲಿ ಹಾಸ್ಯ ಮರೀಚಿಕೆಯಾಗಿ ಬರೀ ಅಸಂಬದ್ಧ ಸಂಭಾಷಣೆಗಳೇ ತುಂಬಿಕೊಂಡಿವೆ. ಪ್ರತೀ ಕಂತಿನಲ್ಲೂ ಮದುವೆ, ಹನಿಮೂನ್ ಇವಿಷ್ಟರಲ್ಲಿಯೇ ಹಾಸ್ಯ ಬಿಂಬಿತವಾಗುತ್ತಿವೆ. ಕುಟುಂಬ ಸಮೇತ ಈ ಕಾರ್ಯಕ್ರಮವನ್ನು ನೋಡಲಿಕ್ಕೆ ಅಸಹ್ಯವಾಗುತ್ತಿದೆ. ಇಂತಹ ಕಾರ್ಯಕ್ರಮವು ಚಿಕ್ಕ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ದಯವಿಟ್ಟು ಕಥೆ, ಸಂಭಾಷಣೆ ಬರೆಯುವವರು ಆರೋಗ್ಯಕರವಾದ ಹಾಸ್ಯವನ್ನು ಉಣಬಡಿಸಲಿ ಎಂಬುದೇ ವೀಕ್ಷಕರ ಆಶಯ.

–ಸುಮಿತ್ರಾ, ಕಟೀಲು

## ಮುದುಡಿದ ತಾವರೆ ಅರಳಿತು

ಹೊಸ ವರ್ಷದ ದಿನದಂದು ಅನು ಮುಖ ಅರಳಿತು. ಕಾರಣ ಆರ್ಯವರ್ಧನ್ ಐಲವ್‌ಯು ಅನು ಎಂದ. ಅತ್ತು ಅತ್ತು ಮುಖ ಮುದುಡಿದ ತಾವರೆಯಂತಾಗಿತ್ತು. ಅದಕ್ಕೆ ಆರ್ಯವರ್ಧನ್ ಜೀವ ತುಂಬಿದರು. 'ರೋಗಿ ಬಯಸ್ಸಿದ್ದು ವೈದ್ಯ ಹೇಳಿದ್ದು ಒಂದೆ' ಎಂಬಂತಾಯಿತು. ಪ್ರೀತಿಗೆ ಕಣ್ಣಿಲ್ಲ ಎನ್ನುವ ಹೊಸ ಟ್ರೆಂಡ್ ಹೊಸ ವರ್ಷದೊಂದಿಗೆ ಉದಯವಾಯಿತು. ಪ್ರಪೋಸ್ ಹೀಗೂ ಮಾಡಬಹುದು.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಲೆಕ್ಕವೇಕೆ ಕಷ್ಟ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ತುಂಬಾ ಸೊಗಸಾಗಿ ಮೂಡಿ ಬರುತ್ತಿದೆ. ಈ ವಾರವಂತೂ ಅಪರೂಪದ ಶಿವಲಿಂಗಗಳನ್ನು ನೋಡಿ ತುಂಬಾ ಖುಷಿಯಾಯಿತು. ಡಾ.ನಾ. ಸೋಮೇಶ್ವರ್ ಅವರು ಪ್ರತಿಯೊಂದು ವಿಷಯದ ಬಗ್ಗೆ ವಿವರಣೆ ಅಮೋಘವಾಗಿದೆ. ಆದರೆ ಈ ಕಾರ್ಯಕ್ರಮಕ್ಕೆ ಬರುವ ಅನೇಕ ವಿದ್ಯಾರ್ಥಿಗಳು ಮತ್ತು ಉದ್ಯೋಗದಲ್ಲಿರುವವರು ಒಂದು ಸಣ್ಣ ಲೆಕ್ಕವನ್ನು ಮಾಡಲು ಅವರಿಗೆ ಬರುವುದಿಲ್ಲವಲ್ಲಾ? ಪ್ರತಿಯೊಂದು ಕಂತಿನಲ್ಲೂ ತಪ್ಪು ಉತ್ತರ, ಎಲ್ಲೊ ಒಂದು ಬಾರಿ ಮಾತ್ರ ಸರಿ ಉತ್ತರ ಬರುತ್ತದೆ. ಇದು ಅಷ್ಟೊಂದು ಕಷ್ಟವೆ?

–ಡಿ.ಎಸ್. ಪಂಕಜ ಸುಬ್ರಮಣ್ಯ, ಬೆಂಗಳೂರು

## ನಯನ ಮನೋಹರ

ಡಿ. 26 ಗುರುವಾರದ 'ಮಗಳು ಜಾನಕಿ' ಧಾರಾವಾಹಿಯ ಜಾನಕಿ ಮತ್ತು ಆನಂದ ಬೆಳಗೂರರ ಅಭಿನಯ ವರ್ಣಿಸಲಸಾಧ್ಯ. ಎಂತಹ ನೋವು, ತಲ್ಲಣ, ದುಗುಡ ಇಬ್ಬರ ಭಾವಾನುಭವದಲ್ಲಿ ಎದ್ದು ಕಾಣುತ್ತಿತ್ತು. ನಿಜವಾಗಲೂ ಅದ್ಭುತವಾಗಿತ್ತು. ಇಂತಹ ನಟನೆಯನ್ನು ತೋರಿಸಲು ಸೀತಾರಾಂ ಅವರಂತಹ ನಿರ್ದೇಶಕರಿಂದ ಮಾತ್ರ ಸಾಧ್ಯ. ಅತ್ಯದ್ಭುತವಾಗಿತ್ತು.

–ಪ್ರಮೀಳಾ ಷಣ್ಮುಖ, ಮೈಸೂರು

## ಸೂಪರ್ ಪಾಂಡು

ತಂತ್ರಜ್ಞಾನದ ಯುಗದಲ್ಲಿ ಮಾನವ ಸಮಾಜಕ್ಕೆ ನಗುವೆಂಬ ಟಾನಿಕ್‌ನಿಂದ ನಕ್ಕು ನಗಿಸುತ್ತಿರುವ ಅರ್ಥಪೂರ್ಣ ಸಾಹಿತ್ಯ–ನಿರ್ದೇಶನದಿಂದ ಕೂಡಿದ ಧಾರಾವಾಹಿ 'ಪಾಪ ಪಾಂಡು'. ನೈಜ ಸಮಸ್ಯೆಗಳಲ್ಲಿ ಹುಟ್ಟಿಕೊಂಡ ಹಾಸ್ಯವೆಂಬುವದಲ್ಲಿ ಎರಡು ಮಾತಿಲ್ಲ. ಅದೇ ರಾಗ ಅದೇ ಹಾಡು ಎನ್ನುವ ಧಾರಾವಾಹಿಗಳ ಮಧ್ಯ ಮನೆ ಮಂದಿಗೆ ಪರಿಪೂರ್ಣ ಹಾಸ್ಯ ನೀಡುತ್ತಿರುವುದರ ಜೊತೆಗೆ ಮಾನಸಿಕ ನೆಮ್ಮದಿ ಆರೋಗ್ಯಪೂರ್ಣ ಚೈತನ್ಯ ನೀಡುತ್ತಿರುವ ಧಾರಾವಾಹಿ ಎಂದರೆ ತಪ್ಪಿಲ್ಲ. ಎಲ್ಲ ಪಾತ್ರಗಳು ನೈಜ ಹಾಸ್ಯಕ್ಕೆ ಒತ್ತು ನೀಡಿ ಅಭಿನಯ ನೀಡಿದ್ದಾರೆ. ಪಾಪ ಪಾಂಡು ಎಂದು ಮುಗಿಯದ ಧಾರಾವಾಹಿಯಾಗಿ ಮುಂದೆ ಸಾಗಲಿ.

–ಕುಬೇರಪ್ಪ ಎಂ. ವಿಭೂತಿ, ಹರಿಹರ